ಕಾಂಪೌಂಡ್ ಗೋಡೆ ತೆರವುಗೊಳಿಸುವುದು

44 (114) ಶ್ರೀ ಸುರೇಶ್‌ಗೌಡ (ನಾಗಮಂಗಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿ ವಲಯದಲ್ಲಿನ ಜ್ಞಾನಜ್ಯೋತಿನಗರ 1ನೇ ಅಡ್ಡರಸ್ತೆಯಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಕಾಂಪೌಂಡನ್ನು ತ್ವರಿತವಾಗಿ ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ಭರವಸೆ ನೀಡಿದ ನಂತರವೂ ಸಹ ಕಾಂಪೌಂಡ್ ಇದ್ದ ಜಾಗದಲ್ಲಿ ತಾತ್ಕಾಲಿಕ ಮನೆಯನ್ನು ನಿರ್ಮಿಸಿ, ರಸ್ತೆ ಸಂಚಾರಕ್ಕೆ ಅಡಚಣೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕ್ರಮ ಕೈಗೊಳ್ಳುವುದು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಇ) ಪಾಲಿಕೆಯ ಈ ಕ್ರಮ ಸದನಕ್ಕೆ ಅವಮಾನಿಸಿದಂತಲ್ಲವೇ ; ಹಾಗಿದ್ದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬಾರದೇಕೆ;

ಈ) ಈ ಕಾಂಪೌಂಡನ್ನು ಯಾವಾಗ ತೆರವುಗೊಳಿಸಲಾಗುವುದು ; (ದಿನಾಂಕ ನಿಖರವಾಗಿ ತಿಳಿಸುವುದು) ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ಸದರಿ ಕಾಂಪೌಂಡ್ ಗೋಡೆಯನ್ನು ಬಿ.ಬಿ.ಎಂ.ಪಿ. ವತಿಯಿಂದ ತೆರವುಗೊಳಿಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದಿರುವುದರಿಂದ ರಾತ್ರೋ ರಾತ್ರಿ ಕಾಂಪೌಂಡ್ ನಿರ್ಮಿಸಿಕೊಂಡಿರುತ್ತಾರೆ. ಹಾಗೂ ಕಾಂಪೌಂಡ್ ಇದ್ದ ಜಾಗದಲ್ಲಿ ತಾತ್ಕಾಲಿಕ ಮನೆಯನ್ನು ನಿರ್ಮಿಸಿ ರಸ್ತೆ ಸಂಚಾರಕ್ಕೆ ಅಡಚಣೆಯುಂಟಾಗಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಶ್ರೀ ನಟರಾಜ್‌ರವರ ಅನುಭವದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಾರ್ಡ್-129 (ಬೆಂಗಳೂರು ವಿಶ್ವವಿದ್ಯಾಲಯ) ಯಶವಂತಪುರ ಹೋಬಳಿ, ಮಲ್ಲತ್ತಹಳ್ಳಿ ಗ್ರಾಮದ ಸರ್ವೆ ನಂ: 42ರ ಜ್ಞಾನಭಾರತಿ ಬಡಾವಣೆಯ ಜ್ಞಾನಜ್ಯೋತಿನಗರದ ಸ್ವತ್ತಿನ ಸಂಖ್ಯೆ: 47ರಲ್ಲಿ 288.25 ಚದರ ಅಡಿ ಜಾಗವನ್ನು ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಂಡು, ಸ್ವತ್ತಿನ ಖಾತೆದಾರರಿಗೆ ಭೂಪರಿಹಾರವನ್ನು ಪಾವತಿಸುವ ಬಗ್ಗೆ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ 25.01.2011ರಂದು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ 10.2.2011ರಂದು ಹಾಗೂ

ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ದಿನಾಂಕ 24.02.2011ರಂದು ವಿಷಯ ಸಂಖ್ಯೆ: 5(247)ರಲ್ಲಿ ಅನುಮೋದಿತವಾಗಿರುತ್ತದೆ. ಈ ಸಂಬಂಧ ಪಾಲಿಕೆಯಿಂದ ಬರಬಹುದಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಭೂ ಸ್ವಾಧೀನ ಕಾಯ್ದೆ ಅಧಿನಿಯಮದ ಕಲಂ 4(1)ರನ್ವಯ ಪ್ರಾರಂಭಿಕ ಅಧಿಸೂಚನೆ ಹೊರಡಿಸಲಾಗುವುದು. ನಂತರ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಸ್ವತ್ತಿನ ಖಾತೆದಾರರಿಗೆ ಪರಿಹಾರ ಪಾವತಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ತಕ್ಷಣ ಸದರಿ ಜಾಗದಲ್ಲಿರುವ ಕಾಂಪೌಂಡ್ ಅಥವಾ ಇನ್ಯಾವುದೇ ನಿರ್ಮಿತ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸುರೇಶ್ ಗೌಡ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ನಾಲ್ಕನೆ ಸಾರಿ ಪ್ರಶ್ನೆಯನ್ನು ಹಾಕಿದ್ದೇನೆ. ಮೊದಲನೇ ಸಾರಿ ಪ್ರಶ್ನೆ ಹಾಕಿದಾಗ ಅಲ್ಲಿ ಫೌಂಡೇಷನ್ ಹಾಕಿದರು. ಎರಡನೇ ಪ್ರಶ್ನೆ ಕೇಳಿದಾಗ ಕಾಂಪೌಂಡ್ ಹಾಕಿದರು. ಮೂರನೇ ಪ್ರಶ್ನೆ ಕೇಳಿದಾಗ ಅಲ್ಲಿ ಶೆಡ್ ಹಾಕಿದ್ದಾರೆ. ಈಗ ನಾಲ್ಕನೇ ಸಾರಿ ತಮಗೆ ಪ್ರಶ್ನೆ ಕೇಳಿದ್ದೇನೆ. ನಾಲ್ಕು ಸಾರಿ ಕೂಡ ಒಂದೇ ಉತ್ತರವನ್ನು ಕೊಟ್ಟಿದ್ದೀರಿ. ಅಂದರೆ, ಭೂಸ್ವಾಧೀನ ಮಾಡಿಕೊಂಡು ಡೆಮಾಲಿಷ್ ಮಾಡುತ್ತೇವೆಂದು ಹೇಳಿದ್ದೀರಿ. ಆದ್ದರಿಂದ, ಇದನ್ನು ಯಾವತ್ತು ಮತ್ತು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂಬ ಬಗ್ಗೆ ಉತ್ತರ ಬೇಕು. ಏಕೆಂದರೆ ಇದು ರಿಂಗ್ ರೋಡ್‌ನಿಂದ ಕೇವಲ 50 ಮೀಟರ್ ದೂರ ಇದೆ. ಇದು vacate ಆದರೆ ತಿರುಗಾಡುವುದಕ್ಕೆ ಬಹಳ ಅನುಕೂಲವಾಗುತ್ತದೆ. ಈಗ ಅವರು ರಸ್ತೆಯಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಗೌಡರು ಹೇಳತಕ್ಕಂಥದು ಸರಿಯಾಗಿದೆ. ಜ್ಞಾನಜ್ಯೋತಿ ನಗರದಲ್ಲಿ ಒಂದು ಖಾಸಗಿ ಲೇಔಟ್ ಆಗಿದೆ. ಅಂದರೆ, ಅನಧಿಕೃತ ಬಡಾವಣೆಯಾಗಿದ್ದು, ಈಗ ಅದು ಬಿಬಿಎಂಪಿ ಲಿಮಿಟ್‌ಗೆ ಬರುತ್ತಿದೆ. ಅಲ್ಲೊಂದು ರಸ್ತೆ ಬೇಕೆಂದು ಕೇಳಿದ್ದಾರೆ. ಆ ಜಾಗಕ್ಕೆ ಸಂಬಂಧಪಟ್ಟಿರುವಂಥ ಎಲ್ಲಾ ವಿಷಯಗಳು ತಮಗೆ ಗೊತ್ತಿದೆ. ಯಾವುದೇ ಮುಲಾಜು ನೋಡದೆ ತಕ್ಷಣವೇ ಆ ಜಮೀನನ್ನು ಸ್ವಾಧೀನ ಮಾಡಿಕೊಂಡು ರಸ್ತೆ ಮಾಡಿ ಮುಂದಿನ ಸಾರಿ ಮಾನ್ಯ ಸದಸ್ಯರು ಈ ಸದನದಲ್ಲಿ

ಪ್ರಶ್ನೆ ಕೇಳುವುದರೊಳಗಡೆ ಅಲ್ಲಿ ರಸ್ತೆ ಮಾಡಿದ್ದೇವೆಂದು ನಿಮಗೆ ಸ್ಪಷ್ಟವಾದ ಉತ್ತರ ಕೊಡುವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ ನನ್ನ ಮೇಲೆ ವಿಶ್ವಾಸ ಇಡಿ. ಯಾವುದೇ ಮುಲಾಜಿಲ್ಲದೆ ಸ್ವಾಧೀನ ಮಾಡಿಕೊಂಡು ಅಲ್ಲಿ ರಸ್ತೆ ಮಾಡುತ್ತೇವೆ. ನಿಮಗೆ ಸಮಾಧಾನ ತರುವ ರೀತಿಯಲ್ಲಿ ಕೆಲಸ ಮಾಡಿಸುತ್ತೇವೆ.

ಶ್ರೀ ಸುರೇಶ್ ಗೌಡ: ಧನ್ಯವಾದಗಳು.

ಅಧ್ಯಕ್ಷರು: ಮಾನ್ಯ ಮಾರಿಹಾಳ್ ಸುರೇಶ್ ಶಿವರುದ್ರಪ್ಪರವರೆ, ತಮ್ಮ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗವಾಗಿದೆ. ಆದ್ದರಿಂದ, ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು: ತಮ್ಮ ಪ್ರಶ್ನೆ ಮುಗಿದಿದೆ. ತಮ್ಮ ಪ್ರಶ್ನೆ ಬಂದಾಗ ತಾವು ಬಂದಿರಲಿಲ್ಲ. ಈಗ ಪ್ರಶ್ನೋತ್ತರ ಸಮಯವಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಂಡ್ಯದವರ ಕಡೆಯಿಂದ ಪ್ರಶ್ನೆ ಹಾಕಿದರೆ ಮಾತ್ರ ನಮಗೆ ಸ್ಪಷ್ಟವಾದ ಉತ್ತರ ಮಾನ್ಯ ಮುಖ್ಯ ಮಂತ್ರಿಯವರಿಂದ ಬರುತ್ತದೆಂದು ಈಗ ಗೊತ್ತಾಯಿತು.

ಅಧ್ಯಕ್ಷರು: ಮಾನ್ಯ ಸಿದ್ದು ಸವದಿಯವರೆ, ತಾವು ಪ್ರಶ್ನೆ ಕೇಳಿ.

ಆಶ್ರಯ ಮನೆಗಳನ್ನು ಒದಗಿಸುವುದು

31 (393) ಶ್ರೀ ಸಿದ್ದು ಸವದಿ (ತೇರದಾಳ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 01.04.2008 ರಿಂದ ಇಲ್ಲಿಯವರೆಗೆ ತೇರದಾಳ, ರಬಕವಿ–ಬನಹಟ್ಟಿ ಮತ್ತು ಮಹಾಲಿಂಗಪೂರ ಪಟ್ಟಣಗಳಿಗೆ ಮಂಜೂರು ಮಾಡಿದ ವಿವಿಧ ಯೋಜನೆಗಳಲ್ಲಿಯ ಆಶ್ರಯ ಮನೆಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)

ಆ) ಈ ಮೂರು ನಗರಗಳಲ್ಲಿ ಇರುವ ಆಶ್ರಯ ರಹಿತ ಫಲಾನುಭವಿಗಳ ಸಂಖ್ಯೆ ಎಷ್ಟು ; ಅವರೆಲ್ಲರಿಗೆ ಯಾವ ಯೋಜನೆಗಳಲ್ಲಿ ಮನೆಗಳನ್ನು ಮಂಜೂರು ಮಾಡಲಾಗುವುದು ;